**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್.238/2022**

ಸಾಕ್ಷಿಯನ್ನು ದಿಃ **13.02.2026** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃಶ್ರೀ.** R.K **ವಕೀಲರಿಂದ**:

ದೇವಯ್ಯ ಮತ್ತು ಸಣ್ಣತಾಯಮ್ಮ ನನ್ನ ತಾತ ಮತ್ತು ಅಜ್ಜಿ. ಅವರಿಗೆ 4ಜನ ಮಕ್ಕಳು. ಅವರೆಂದರೆ ನನ್ನ ತಂದೆ ದೊಡ್ಡಯ್ಯ, ಈರಯ್ಯ, ತಮ್ಮಯ್ಯ ಮತ್ತು ವಾದಿ ಪುಟ್ಟಸ್ವಾಮಿ ಎಂದರೆ ಸರಿ. ನನ್ನ ತಂದೆ 2003ರಲ್ಲಿ ಮೃತಪಟ್ಟರು. ನಾನು SSLC ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. 1ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ಬಂದಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರು 1980-81ನೇ ಸಾಲಿನಲ್ಲಿ ಭಾಗವಾಗಿ ಆಗಿನಿಂದ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ. ಚಿಲ್ಕುಂದ ಗ್ರಾಮದ ಸರ್ವೇ ನಂಬರ್ 246/1ರ ಒಟ್ಟು ವಿಸ್ತೀರ್ಣ 3 ಎಕರೆ 18 ಗುಂಟೆ ಆ ಪೈಕಿ 2 ಗುಂಟೆ ಕರಾಬು ಎಂದರೆ ಸರಿ. ಅದೇ ಗ್ರಾಮದ 246/2ರ ಒಟ್ಟು ವಿಸ್ತೀರ್ಣ 3 ಎಕರೆ 14 ಗುಂಟೆ ಇದ್ದು ಒಂದು ಗುಂಟೆ ಖರಾಬು ಎಂದರೆ ಸರಿ. ಮೇಲೆ ಹೇಳಿದ ಜಮೀನುಗಳಲ್ಲಿ ನನ್ನ ತಂದೆಯ ಭಾಗಕ್ಕೆ ಬಂದ ಜಮೀನಿನ ಪೂರ್ವಕ್ಕೆ ವೆಂಕಟೇಶ್ ರವರ ತೋಟ, ಪಶ್ಚಿಮಕ್ಕೆ ನಂದಿ ದೇವಯ್ಯನ ಜಮೀನು, ಉತ್ತರಕ್ಕೆ ಈರಯ್ಯನ ಜಮೀನು ಎಂದರೆ ಸರಿ. ದಕ್ಷಿಣಕ್ಕೆ ತಮ್ಮಯ್ಯನ ಜಮೀನು ಎಂದರೆ ಸರಿಯಲ್ಲ ಅಪ್ಪಣ್ಣರವರ ಜಮೀನು. ಸದರಿ ಚೆಕ್ಕುಬಂದಿ ಸರ್ವೇ ನಂಬರ್ 246/2ರಲ್ಲಿ ಒಂದು ಎಕರೆ 26ವರೆ ಗುಂಟೆಗೆ ಬರುತ್ತದೆ ಎಂದರೆ ಸರಿ.

ನನಗೂ ವಾದಿಗೂ ದ್ವೇಷ ಇಲ್ಲ. ವಾದಿಯ ಹಿಸ್ಸೆಯ ಜಮೀನಿನ ಪೂರ್ವಕ್ಕೆ ಚನ್ನಿಗರಾಯರವರ ಜಮೀನು ಎಂದರೆ ಗೊತ್ತಿಲ್ಲ. ಪಶ್ಚಿಮಕ್ಕೆ ಹೆಜ್ಜೂರಯ್ಯರವರ ಜಮೀನು ಎಂದರೆ ಗೊತ್ತಿಲ್ಲ. ದಕ್ಷಿಣಕ್ಕೆ ಅಪ್ಪಯ್ಯನ ಜಮೀನು ಎಂದರೆ ಗೊತ್ತಿಲ್ಲ. ಉತ್ತರಕ್ಕೆ ತಮ್ಮಯ್ಯನ ಜಮೀನು ಎಂದರೆ ಗೊತ್ತಿಲ್ಲ. ವಾದಿಗೆ ಅಲ್ಲಿ ಜಮೀನು ಇದೆ. ಮೇಲೆ ಹೇಳಿದ ಚೆಕ್ಕುಬಂದಿ ವಾದಿಗೆ ಸೇರಿದ ಸರ್ವೇ ನಂಬರ್ 246/1ರಲ್ಲಿರುವ ಒಂದು ಎಕರೆ 28 ಗುಂಟೆಗೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಾದಿಯ ಆಸ್ತಿಯ ಮೇಲೆ ನನಗೆ ಅಧಿಕಾರ ಇಲ್ಲ. ವಾದಿಯ ಆಸ್ತಿಗೆ ಡಿಕ್ರಿಯಾದರೆ ನನಗೆ ತೊಂದರೆ ಇಲ್ಲ.

ನನಗೂ 2ನೇ ಪ್ರತಿವಾದಿಗೂ ವೈಮನಸ್ಸು ಇಲ್ಲ. ಪೂರ್ವಕ್ಕೆ ವೆಂಕಟೇಶ್ ರವರ ತೋಟ, ಪಶ್ಚಿಮಕ್ಕೆ ಬೊಟ್ಟಯ್ಯರವರ ಜಮೀನು, ದಕ್ಷಿಣಕ್ಕೆ ಪುಟ್ಟನಂಜಮ್ಮ ಎಂದರೆ ನನ್ನ ತಾಯಿರವರ ಜಮೀನು, ಉತ್ತರಕ್ಕೆ ಲಕ್ಕಿಕುಂಡಯ್ಯನ ಜಮೀನು ಎಂದರೆ ಇರಬಹುದು. ಸದರಿ ಚೆಕ್ಕುಬಂದಿಯಲ್ಲರುವ ಜಮೀನು 2ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಸರ್ವೇ ನಂಬರ್ 246/2ರಲ್ಲಿ ಒಂದು ಎಕರೆ 26ವರೆ ಗುಂಟೆ ಎಂದರೆ ಸುಳ್ಳು. 2ನೇ ಪ್ರತಿವಾದಿಗೆ ಅಲ್ಲಿ ಆಸ್ತಿ ಇದ್ದು,

ಅವರು ಸ್ವಾಧೀನಾನುಭವ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆ. ಅವರು ವ್ಯವಸಾಯ ಮಾಡುತ್ತಿರುವ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ.

3ನೇ ಪ್ರತಿವಾದಿ ನನ್ನ ಚಿಕ್ಕಪ್ಪನಾಗಿದ್ದು ಅವರಿಗೂ ನನಗೂ ವೈಮನಸ್ಸು ಇಲ್ಲ. 3ನೇಪ್ರತಿವಾದಿಯ ಪೂರ್ವಕ್ಕೆ ಚನ್ನಿಗರಾಯನ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ಹೆಜ್ಜೂರಯ್ಯರವರ ಜಮೀನು. ದಕ್ಷಿಣಕ್ಕೆ ವಾದಿಯ ಜಮೀನು ಎಂದರೆ ಸರಿ. ಉತ್ತರಕ್ಕೆ ನನ್ನ ತಾಯಿಯಾದ 1ನೇ ಪ್ರತಿವಾದಿಯ ಜಮೀನು ಎಂದರೆ ಸುಳ್ಳು. ಸದರಿ ಚಕ್ಕುಬಂಧಿಯಲ್ಲಿರುವ ಜಮೀನು ಸರ್ವೆ ನಂಬರ್ 246/1ರಲ್ಲಿ 1 ಎಕರೆ 28 ಗುಂಟೆ ಎಂದರೆ ಸರಿ. ಆ ಜಮೀನಿನ ಮೇಲೆ ನನಗೆ ಅಧಿಕಾರ ಇಲ್ಲ ಎಂದರೆ ಇದೆ. ಮೇಲೆ ಹೇಳಿದ ಚಕ್ಕುಬಂದಿಯಲ್ಲಿರುವ ಜಮೀನನ್ನು 3ನೇ ಪ್ರತಿವಾದಿ ವ್ಯವಸಾಯ ಮಾಡಿಕೊಂಡಿದ್ದು, ಅವರೇ ಸಂಪೂರ್ಣ ಮಾಲೀಕರಾಗಿದ್ದಾರೆ ಎಂದರೆ ಸರಿ. ವಾದಿ ಹಾಗೂ 1 ರಿಂದ 3ನೇ ಪ್ರತಿವಾದಿಯರಾದ ನಮ್ಮ ಜಮೀನುಗಳನ್ನು ಸರ್ವೆ ಮಾಡಿಸಿ ಕಲ್ಲು, ಬಾಂದುಗಳನ್ನು ಗುರುತಿಸಲು ನನ್ನ ತಕರಾರು ಇಲ್ಲ.

ಸರ್ವೆ ನಂಬರ್ 246/1ರಲ್ಲಿದ್ದ ಒಟ್ಟು 1 ಎಕರೆ 28 ಗುಂಟೆಯನ್ನು ಕಂದಾಯ ಅಧಿಕಾರಿಗಳು ಭಾಗ ಮಾಡಿ ಸರ್ವೆ ನಂಬರ್ 246/1ರಲ್ಲಿ 34 ಗುಂಟೆಗೆ ಪಹಣಿ ದಾಖಲಿಸಿದ್ದರೆ ಎಂದರೆ ಸರಿ. ವಾದಿ ತನ್ನ ಪಹಣಿಯನ್ನು 1 ಎಕರೆ 28 ಗುಂಟೆ ಬದಲು ಕೇವಲ 34 ಗುಂಟೆ ತೋರಿಸಿರುವುದಾಗಿ ಉಪವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಅಲ್ಲಿ ಉಪವಿಭಾಗಾಧಿಕಾರಿಗಳು ನಿಮ್ಮ ಚಕ್ಕುಬಂದಿಗೆ ಅನುಗುಣವಾಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ಆದೇಶ ಪಡೆದುಕೊಳ್ಳಿ ಎಂದು ಆದೇಶ ಮಾಡಿದರು ಎಂದರೆ ಸರಿ. ಆ ಕಾರಣದಿಂದ ವಾದಿ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ.

## ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.